ಕೂಗುತ್ತಾ ದಾಂಧಲೆಯೆಬ್ಬಿಸುತ್ತಿದ್ದವು.

ಬಾಲಕೃಷ್ಣ ಬಾಯಿ ತೆರೆದು ಒಮ್ಮೆ ಜೋರಾಗಿ ಉಫ್ ಎಂದದ್ದೇ ಅವನ ಬಾಯಿಯಿಂದ ಹೊಗೆಯಂತೆ ಹೊರಬಂದಿತು ಹಬೆ. ಆಮೇಲೆ ಅವನು ಮತ್ತೆ ಮತ್ತೆ ಉಫ್ ಉಫ್ ಎನ್ನುತ್ತ ಊರಿನ ದಾರಿಗಳಲ್ಲಿ ಬೇಗ ಬೇಗ ನಡೆದ. ಊರ ಹೊರಗಿನ ಹಳ್ಳವನ್ನು ತಲಪಿದ್ದೇ ಹಿಂದಿನ ರಾತ್ರಿ ಅವನ ಅಮ್ಮ ಕಾಗದದಲ್ಲಿ ಮಾಡಿಕೊಟ್ಟಿದ್ದ ದೋಣಿಗಳನ್ನು ತೇಲಿಬಿಡಬೇಕೆಂದು ನೀರಿನಂಚಿಗೆ ಕೂತರೆ ಕಣ್ಣೆದುರಿಗೇ ಮಣಿಸರದ ಮಣಿಗಳ ಹಾಗೆ ಒಂದರ ಹಿಂದೆ ಒಂದರಂತೆ ಸಾಲಾಗಿ ತೇಲುತ್ತಿರುವ ಬಾತುಕೋಳಿಗಳು. ಅವುಗಳನ್ನೇ ಸುಮಾರು ಹೊತ್ತು ನೋಡಿದವನು, ದೇವನಹಳ್ಳಿಯ ನೆನಪಾದದ್ದೇ ಧಿಗ್ಗನೆದ್ದು ಓಡತೊಡಗಿದ.

ಇವತ್ತು ಮಕ್ಕಳು ಒಂದು ಬಸ್ಸಿನಲ್ಲಿ ಎಂಟು ಮೈಲಿ ದೂರದ ದೇವನಹಳ್ಳಿಗೆ ಹೋಗಿ ಟಿಪ್ಪು ಸುಲ್ತಾನನ ಕೋಟೆಯನ್ನು ನೋಡಲಿದ್ದರು. ಸಿಸ್ಟರ್ ರೋಸಿಯವರು ಒಂದು ವಾರದಿಂದಲೂ ಅವರಿಗೆ ಟಿಪ್ಪು ದೇವನಹಳ್ಳಿಯಲ್ಲಿ ಹುಟ್ಟಿದವನೆಂದೂ ಅಲ್ಲಿ ಅವನು ಕಟ್ಟಿದ ಒಂದು ದೊಡ್ಡ ಕೋಟೆಯಿದೆಯೆಂದೂ ಹೇಳುತ್ತಲೇ ಇದ್ದರು. ಬಾಲಕೃಷ್ಣ ಅದು ಹೇಗೆ ಕಾಣಬಹುದೆಂದು ಎಷ್ಟು ಯೋಚಿಸಿದರೂ ದೊಡ್ಡದೊಂದು ಸುತ್ತುಗೋಡೆ, ಬತೇರಿ, ಶತ್ರುಗಳು ಯಾರೂ ನುಗ್ಗಿಬರಲಾಗದಂಥ ಭಾರಿ ದಿಡ್ಡಿ ಬಾಗಿಲು ಇಷ್ಟನ್ನು ಬಿಟ್ಟು ಬೇರೇನನ್ನೂ ಕಲ್ಪಿಸಿಕೊಳ್ಳಲಾಗಿರಲಿಲ್ಲ.

ಪ್ರತಿದಿನವೂ ಬೆಳಿಗ್ಗೆ ಎಂಟೂವರೆಯ ಹೊತ್ತಿಗೆಲ್ಲ ಮಕ್ಕಳು ಕ್ಲಾಸಿನಲ್ಲಿ ಉದ್ದುದ್ದನೆಯ ಡೆಸ್ಕುಗಳಲ್ಲಿ ಕೂತುಕೊಂಡು ಸಿಸ್ಟರ್ ರೋಸಿಯವರಿಗಾಗಿ ಕಾಯುತ್ತಿರುತ್ತಿದ್ದರು. ಹಾಗೆ ನೋಡಿದರೆ ಮಕ್ಕಳು ಕಾಯುತ್ತಿದ್ದದ್ದು ಅವರಿಂದ ಕೆನ್ನೆ ಸವರಿಸಿಕೊಳ್ಳುವುದಕ್ಕಾಗಿ. ಅವರು ಕ್ಲಾಸಿನೊಳಗೆ ಕಾಲಿಟ್ಟದ್ದೇ ಅವರ ಮುಖಗಳು ಬೆಳಗುತ್ತಿದ್ದವು. ಒಬ್ಬೊಬ್ಬರೂ ಒಂದೊಂದು ಸ್ವರದಲ್ಲಿ ಗುಡ್ ಮಾರ್ನಿಂಗ್ ಹೇಳುತ್ತಿದ್ದರು.

ಕಾನ್ವೆಂಟಿನಲ್ಲಿ ಸಿಸ್ಟರ್ ರೋಸಿಯವರೊಬ್ಬರೇ ಅಲ್ಲ, ಮಾಲತಿ ಟೀಚರ್, ಸುಭದ್ರ ಟೀಚರ್, ನಾರಾಯಣ ಟೀಚರ್, ಪ್ರದ್ಯುಮ್ನ ಟೀಚರ್ ಇದ್ದರು. ಹೆಡ್‌ಮಾಸ್ಟರ್ ಗೇಬ್ರಿಯಲ್ ಚಿನ್ನಪ್ಪನವರೂ ಇದ್ದರು. ಆದರೂ ಮಕ್ಕಳಿಗೆ ಸಿಸ್ಟರ್ ರೋಸಿಯವರ ಕ್ಲಾಸೆಂದರೆ ಖುಷಿಯೋ ಖುಷಿ. ಅವರು ತಮ್ಮ ದನಿ ಸ್ಕೂಲಿನ ಹೊರಗೆ ಹೋಗಬಾರದೆಂದೋ ಏನೋ, ತುಂಬಾ ಮೆಲ್ಲಗೆ ಮಾತಾಡುತ್ತಿದ್ದರು. ಪಾಠಗಳ ನಡುವೆ ಕತೆ ಹೇಳುತ್ತಿದ್ದರು. ತಮಾಷೆ ಮಾಡುತ್ತಿದ್ದರು. ನೀವೆಲ್ಲ ಚೆನ್ನಾಗಿ ಓದಬೇಕು, ಓದಿ ಓದಿ ಬುದ್ಧಿವಂತರಾಗಬೇಕು ಎನ್ನುತ್ತಿದ್ದರು. ಭುವನಗಿರಿಗೆ ಬರುವ ಮುಂಚೆ ಅವರು ಬೆಂಗಳೂರಿನ ಒಂದು ಕಾಲೇಜಿನಲ್ಲಿ ನಾಲ್ಕು ವರ್ಷ ಓದಿದ್ದರಂತೆ.

ಅವರು ಮೊದಲ ದಿನ ಕ್ಲಾಸಿಗೆ ಬಂದಾಗ ಅವರ ದುಂಬಿಕಣ್ಣು ಫಳಫಳವೆಂದಿತ್ತು. ಕೆನ್ನೆ, ತುಟಿ ಕೆಂಪಗೆ ಹೊಳೆದಿದ್ದವು. ಅವರು ಮಕ್ಕಳು ಒಬ್ಬೊಬ್ಬರನ್ನೇ ಬಳಿಗೆ ಕರೆದು ಎರಡೆರಡು ಶುಂಠಿ ಪೆಪ್ಪರಮೆಂಟು ಕೊಟ್ಟಿದ್ದರು. ಹೆಬ್ಬೆರಳು, ತೋರು ಬೆರಳುಗಳಲ್ಲಿ ಸೀಮೆಸುಣ್ಣವನ್ನು ಹಿಡಿದುಕೊಂಡು ಬೋರ್ಡಿನ ಮೇಲೆ ಮುದ್ದಾದ ಅಕ್ಷರಗಳಲ್ಲಿ ಕೆಲವು ವಾಕ್ಯಗಳನ್ನು ಬರೆದು, ಅಂಚಿನಲ್ಲಿ ಒಂದು ಹೂಬಳ್ಳಿಯನ್ನೂ ಮೂಡಿಸಿದ್ದರು. ಆಮೇಲೆ ಒಂದು ದಿನ ಸ್ಕೂಲಿನ ಅಂಗಳದಲ್ಲೇ ಇದ್ದ ಗಿಡದಿಂದ ಒಂದು ಗುಲಾಬಿಯನ್ನು, ಅದಕ್ಕೆ ನೋವಾದೀತೇನೋ ಎಂಬಂತೆ, ಮೆಲ್ಲಗೆ ಬಿಡಿಸಿಕೊಂಡು ಅದನ್ನೊಮ್ಮೆ ಮೂಸಿ ನೋಡಿ ಬಾಲಕೃಷ್ಣನ ಕೈಯಲ್ಲಿಟ್ಟಿದ್ದರು – ನೋಡು ಎಂಥ ಚಂದದ ಪರಿಮಳ ಎನ್ನುವಂತೆ.

ಇವತ್ತು ಬಾಲಕೃಷ್ಣ ಸ್ವಲ್ಪ ತಡವಾಗಿ ಕ್ಲಾಸಿನೊಳಕ್ಕೆ ಹೋದಾಗ ಬೋರ್ಡಿನಲ್ಲಿ ಏನೋ ಬರೆಯುತ್ತಿದ್ದ ಸಿಸ್ಟರ್ ರೋಸಿ ಯಾಕೆ ಲೇಟು ಎನ್ನುವಂತೆ ಅವನನ್ನು ನೋಡಿದರು. ಸದಾ ಫಳಫಳವೆನ್ನುತ್ತಿದ್ದ ಅವರ ಕಣ್ಣುಗಳು ತಮ್ಮ ಎಂದಿನ ಹೊಳಪು ಕಳೆದುಕೊಂಡು ತುಸು ಕೆಂಪಗಾಗಿದ್ದವು. ಅವರ ದನಿಯೂ ಎಂದಿನಂತೆ ಮಧುರವಾಗಿ ಕೇಳಿಸಲಿಲ್ಲ. ಒಂದೆರಡು ಕ್ಷಣ ಗೋಡೆಯ ಮೇಲಿನ ಗಡಿಯಾರವನ್ನೇ ನೋಡಿದವರು ಮಕ್ಕಳ ಕಡೆ ತಿರುಗಿ ಈಗ ಎಲ್ಲರೂ ಒಂದೊಂದು ಚಿತ್ರ ಬಿಡಿಸಿ ಎಂದು ಹೇಳಿದರು. ಬಾಲಕೃಷ್ಣ ಬ್ಯಾಗಿನಿಂದ ಡ್ರಾಯಿಂಗ್ ಪುಸ್ತಕವನ್ನೂ ಪೆನ್ಸಿಲು ರಬ್ಬರುಗಳನ್ನೂ ಕ್ರೇಯಾನ್ ಬಣ್ಣಗಳ ಬಾಕ್ಸನ್ನೂ ಹೊರಕ್ಕೆ ತೆಗೆದು ಯಾವುದರ ಚಿತ್ರ ಬರೆಯಬೇಕೆಂದು ಯೋಚಿಸಿದ. ಒಂದೆರಡು ಕ್ಷಣದಲ್ಲೇ ಅವನ ಮನೆಯ ಹಿತ್ತಲಿನ ಗಿಡಗಳಲ್ಲಿ ಹಾರಾಡುತ್ತ ಚಿಲಿಪಿಲಿಗುಟ್ಟುತ್ತಿದ್ದ ಗುಬ್ಬಚ್ಚಿಗಳು ಕಣ್ಣಮುಂದೆ